

ಕಾಡುಹಂದಿಯ ಗೆಳೆಯ ರೂಬನ್ ಜೊತೆ ಸುಮಂತ್

# ಮುದಗೊಳಿಸುವ ಮಲೆನಾಡ ರೀಲ್ಸ್

■ **ಕೃಷ್ಣಿ ಶಿರೂರ**

ಎರಡೇ ನಿಮಿಷಗಳಲ್ಲಿ ಕಾಡು, ಮೇಡು, ಬೆಟ್ಟದಲ್ಲೆಲ್ಲ ಅಲೆದಾಡಿಸಿ, ನದಿ ತೊರೆ, ಸಮುದ್ರಗಳಲ್ಲಿ ತೇಲಾಡಿಸುವ ರೀಲ್ಸ್ ಮೇನಿಯಾದಲ್ಲಿ ಮೋಡಿ ಮಾಡಿದ್ದು ಚಿಕ್ಕಮಗಳೂರಿನ ಯುವಕ ಸುಮಂತ್ ಗೌಡ.

ಫೇಸ್‌ಬುಕ್ ಮತ್ತು ಇನ್‌ಸ್ಟಾ, ಯೂಟ್ಯೂಬ್‌ನಲ್ಲಿ 'SG ಮಲೆನಾಡು' ಮೂಲಕ ಸುಮಂತ್ ರೀಲ್ಸ್ ಪ್ರಿಯರ ಮನಗೆದ್ದಿದ್ದಾರೆ. ಎರಡೇ ನಿಮಿಷದ ರೀಲ್ ಇಂದು ಅದ್ಭುತ ಜಗತ್ತನ್ನೇ ತೆರೆದಿಡಲಿದೆ. ಅದ್ಭುತ ವಿಡಿಯೊ, ಎಡಿಟಿಂಗ್ ಅದಕ್ಕೆ ತಕ್ಕುದಾಗಿ ಸಹಜ ವಿವರಣೆಯೇ 'SG ಮಲೆನಾಡು' ರೀಲ್ಸ್‌ನ ಬಂಡವಾಳ.

'ನನ್ನ ಪ್ರಯಾಣದ ಕೌತುಕ ಕಥೆಗಳು ನಿಮ್ಮ ಜೊತೆಗೆ (JOIN THE JOURNEY) ಎಂದು ಸುಮಂತ್ ತಮ್ಮ ಪ್ರೊಫೈಲ್‌ನಲ್ಲಿ ಬರೆದುಕೊಂಡಂತೆ ಅವರ ರೀಲ್‌ಗಳನ್ನು ನೋಡುತ್ತ ಅವರಿಡುವ ಹೆಜ್ಜೆಯಲ್ಲಿ ನಮ್ಮ ಹೆಜ್ಜೆ ಮೂಡಿರುತ್ತದೆ. ಉಸಿರಾಡುವುದನ್ನೇ ಮರೆತುಬಿಡುವಂಥ ಅದ್ಭುತ ಅನುಭೂತಿ ಅವರ ರೀಲ್ಸ್‌ಗಳಲ್ಲಿವೆ.

ಕೊಪ್ಪ ತಾಲ್ಲೂಕಿನ ಕಡಬಗೆರೆಯ ಸುಮಂತ್ ಗೌಡ ಬಿ.ಕಾಂ. ಓದಿಕೊಂಡು ಬಿಎಸ್‌ಎನ್‌ಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಮಲೆನಾಡಿನ ಸುಂದರ ನಿಸರ್ಗ, ಐತಿಹಾಸಿಕ ಸ್ಥಳಗಳನ್ನು ಕಟ್ಟಿಕೊಡುವ ತವಕ. ಡಾಕ್ಯುಮೆಂಟರಿಯನ್ನು ನೋಡುವ ಸಹನೆ ಇಂದಿನ ಕಾಲದಲ್ಲಿ ಯಾರಿಗಿದೆ ಎಂಬುದನ್ನು ಲೆಕ್ಕಹಾಕಿ ಫೇಸ್‌ಬುಕ್, ಇನ್‌ಸ್ಟಾದಲ್ಲಿ ರೀಲ್ಸ್ ಮಾಡುವ ಹುಚ್ಚಿಗೆ ಬಿದ್ದರು. ಅದನ್ನು ಅಪ್‌ಲೋಡ್ ಮಾಡಲು ಶುರುವಿಟ್ಟರು. ತಮ್ಮ ಬೈಕ್ ಏರಿ, ಒಂಟಿಯಾಗಿ ತಿರುಗಾಡಿ, ತಮ್ಮ ರೀಲ್‌ನ ಹೂರಣಗಳನ್ನು ಸೆರೆಹಿಡಿದು, ವಿಡಿಯೊಗಳನ್ನು ಸ್ವತಃ ಎಡಿಟ್ ಮಾಡಿ, ತಮ್ಮದೇ ವಾಯ್ಸ್ ಓವರ್ ಕೊಟ್ಟರು.

ಮಲೆನಾಡು, ಕರಾವಳಿಯಲ್ಲಿ ಹುದುಗಿರುವ ಅಪರಿಚಿತ ತಾಣಗಳು, ಪ್ರಾಚೀನ ಮನೆಗಳು, ಕೋಟೆಕೊತ್ತಲಗಳು, ಪ್ರಕೃತಿಯ ಸುಂದರ ತಾಣಗಳು, ಕೃತಿ ವಿಮರ್ಶೆ ಇವರ ರೀಲ್‌ಗೆ ಜೀವಾಳ.

ಕುದುರೆಮುಖ ಕಥನ, ಹಾಳುಬಿದ್ದ ಹೆಂಚಿನ ಕಾರ್ಖಾನೆ, ದಾಂಡೇಲಿಯ ದಟ್ಟ ಕಾಡು, ಆಗುಂಬೆಯಲ್ಲಿ ಸುರಂಗ ಕೊರೆಯುವ ಯೋಜನೆ, ಪಾಳುಬಿದ್ದ ನೀರಿನ ಘಟಕ, ನಾಲ್ಕು ಶತಮಾನಗಳಿಗೂ ಹಳೆಯದಾದ ಕಾಸರಗೋಡಿನ ಧರ್ಮಚಾವಡಿ, ಕೊರಗಜ್ಜನ ಆದಿಸ್ಥಳದ ಪರಿಚಯ ರೋಮಾಂಚನಗೊಳಿಸುತ್ತದೆ.

ಗತಿಸಿದ ವಿಜಯನಗರ ಸಾಮ್ರಾಜ್ಯ, ನಾಶವಾದ ಬಿದನೂರು ಕೋಟೆ, ಕರಾವಳಿಯ ದಕ್ಕೆ ಬಂದರಿನಲ್ಲಿ ಮೀನುಗಾರರ ದಿನಚರಿ, ಮೀನು ವ್ಯಾಪಾರ–ವಹಿವಾಟು, ಬೆಳ್ಳಂದೂರಿನ ಭಯಾನಕ ನರಭಕ್ಷಕ ಹುಲಿಯ ಕಥೆ ಅಚ್ಚರಿ ಮೂಡಿಸಿದರೆ ಅಂಕೋಲಾದ ಕಾಡೊಳಗೆ ಕಳೆದು ಹೋದ ಮೂರು ಶಿವಾಲಯಗಳು ಮನದಲ್ಲಿ ವಿಷಾದ ಮೂಡಿಸುತ್ತದೆ. ದಾಂಡೇಲಿಯ ಕಾಳಿ, ಶಿರಸಿಯಲ್ಲಿ ಹುಟ್ಟಿ, ಅಘನಾಶಿನಿ ನದಿಯ ಸ್ವತಂತ್ರ ಹರಿವಿನ ಕಥನ ಸೋಜಿಗಪಡಿಸಲಿದೆ.

ಇಷ್ಟೆಲ್ಲ ಅಜ್ಞಾತ ಸ್ಥಳಗಳ ಹುಡುಕಾಟ, ನಿರಂತರ ಓಡಾಟ, ರೀಲ್ ಮೇಕಿಂಗ್ ಕೆಲಸದ ಒತ್ತಡದ ನಡುವೆ ಸುಮಂತ್ ಗೌಡರೊಳಗೊಬ್ಬ ಉತ್ತಮ ಓದುಗನಿದ್ದ ಎಂಬುದನ್ನು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೊ', ರವಿ ಬೆಳೆಗೆರೆ ಅವರ 'ಹೇಳಿ ಹೋಗು ಕಾರಣ' ಪುಸ್ತಕಗಳ ವಿಮರ್ಶೆ ಆ ಕೃತಿಗಳನ್ನು ಓದುವಂತೆ ಪ್ರೇರೇಪಿಸಲಿದೆ. ಕವಿಮನೆ, ದಾಂಡೇಲಿ, ಜೊಯಿಡಾ ಕಾಡುಗಳ ದರ್ಶನ, ಜೇನುಗಳಿದ್ದರೆ ಮಾನವನ ಉಳಿವು ಎನ್ನುವ ಜೊಯಿಡಾದ ಜೇನು ಪಾರ್ಕ್, ಮಲೆನಾಡಿನ ಕಥೆ–ವ್ಯಥೆ, ಕೆರೆಗಳ ಪ್ರಾಮುಖ್ಯತೆ ಸಾರುವ ರೀಲ್‌ಗಳೂ ಜ್ಞಾನವನ್ನು ವೃದ್ಧಿಸಲಿವೆ.

ರೀಲ್ಸ್‌ನಲ್ಲಿ ಬಳಸುವ ಉತ್ಕೃಷ್ಟ ಗುಣಮಟ್ಟದ ವಿಡಿಯೊಗಳು ಅವರಲ್ಲೊಬ್ಬ ಉತ್ತಮ ವಿಡಿಯೊಗ್ರಾಫರ್‌ನನ್ನು ತೋರ್ಪಡಿಸಲಿದೆ. ಎಡಿಟಿಂಗ್, ವಾಯ್ಸ್ ಓವರ್ ಕೂಡ ಇತರರು ಅನುಸರಿಸುವಂತೆ ಮಾಡಿದೆ. ಹೆಚ್ಚಿನ ರೀಲ್‌ಗಳು 1M,2M, 3Mವರೆಗೂ ವಿವ್ಸ್ ಕಂಡಿವೆ.

SG ಮಲೆನಾಡು ರೀಲ್ಸ್ ಯಶಸ್ಸಿನ ಹಿಂದಿನ ರೀಲ್ ಮೇಕಿಂಗನ್ನು ಸುಮಂತ 'ಸುಧಾ' ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ. ಮೊದಲು ರೀಲ್ ಮಾಡಬೇಕಾದ ತಾಣದ ಕುರಿತು ಹುಡುಕಾಟ ನಡೆಸುವರು. ಒಂದು ಸ್ಟೋರಿ ಸಿಕ್ಕಿದಾಗ ಹೋಗುವ ದಾರಿಯಲ್ಲಿ ಸಿಗುವ ಮತ್ತಷ್ಟು ಕುತೂಹಲಕರ ಸ್ಥಳಗಳು ಪಟ್ಟಿಯಲ್ಲಿ ಸೇರುತ್ತವೆ. ಚಿತ್ರೀಕರಣಕ್ಕೆ ಅಗತ್ಯ ಫೋನ್, ಕ್ಯಾಮೆರಾ, ಡ್ರೋನ್ ಕ್ಯಾಮೆರಾ ಇತರೆ ಪರಿಕರಗಳ ಜೊತೆ ಬೈಕ್ ಏರಿ ಹೊರಟರೆ ಆರೇಳು ದಿನ ಶೂಟಿಂಗ್‌ನಲ್ಲಿಯೇ ಕಳೆದು ಹೋಗುತ್ತದೆ. ಅಲ್ಲಿ ಸಂಗ್ರಹಿಸಿದ ಮಾಹಿತಿ, ಜನರಿಂದ ಲಭ್ಯ ಸಂಗತಿ ಎಲ್ಲವನ್ನು ಎಡಿಟಿಂಗ್ ವೇಳೆ ಕ್ರೋಡೀಕರಿಸಿದ ನಂತರ ತಮ್ಮ ಅನುಭವವನ್ನು ಸೇರಿಸಿ ಕಂಟೆಂಟ್ ಬರೆದು, 2 ನಿಮಿಷಕ್ಕೆ ರೀಲ್ ಸಿದ್ಧಪಡಿಸುವರು.

ಆರಂಭದಲ್ಲಿ ಇವೆಲ್ಲವನ್ನೂ ಏಕಾಂಗಿಯಾಗಿ ನಿರ್ವಹಿಸಿ, ನಿಭಾಯಿಸುತ್ತಿದ್ದ ಸುಮಂತ್ ಗೌಡ ಈಗ ಚಿತ್ರೀಕರಣಕ್ಕಾಗಿ ತೇಜಸ್ ಅವರ ಸಹಾಯ ತೆಗೆದುಕೊಂಡಿದ್ದಾರೆ. ಕೆಲವು ಸ್ಥಳಗಳನ್ನು ಮುಂಗಾರಿನಲ್ಲೇ ಚಿತ್ರೀಕರಿಸಿದರೆ ಇನ್ನೂ ಚೆಂದ ಎಂಬುದಕ್ಕಾಗಿ ಅಲ್ಲಿವರೆಗೂ ಕಾದು ಶೂಟಿಂಗ್ ಮಾಡುತ್ತಾರೆ. ಮಳೆ, ಗಾಳಿ, ಚಳಿಯನ್ನೂ ಲೆಕ್ಕಿಸದೆ ದಿನಕ್ಕೆ ಸರಾಸರಿ 200ರಿಂದ 300 ಕಿಲೋ ಮೀಟರ್ ಬೈಕ್ ಓಡಿಸುತ್ತಾರೆ. ಒಂದು ರೀಲ್ ಮಾಡುವಾಗ ಪ್ರಾಕೃತಿಕವಾಗಿ, ಸಾಮಾಜಿಕವಾಗಿ ಮತ್ತು ವ್ಯಕ್ತಿಗತವಾಗಿ ಯಾವುದೇ ತೊಂದರೆಗೆ ಎಡೆಯಾಗದಂತೆ ಎಚ್ಚರಿಕೆ ಮುಖ್ಯ ಅನ್ನೋದನ್ನೂ ಸುಮಂತ್ ಹೇಳಿದರು.

ಯೂಟ್ಯೂಬ್‌ಗಾಗಿ ಸ್ವಲ್ಪ ದೊಡ್ಡ ಸ್ಟೋರಿ ಸಿದ್ಧಪಡಿಸುವೆ ಎನ್ನುತ್ತಾರೆ ಸುಮಂತ್. ಸುಮಂತ್ ಗೌಡ ಅವರ ರೀಲ್ಸ್‌ಗೆ ಮಾರುಹೋದ ಕೆಲವು ಅಭಿಮಾನಿಗಳು ಅವರ ಶುದ್ಧ ಕನ್ನಡ, ಸ್ಪಷ್ಟ ಉಚ್ಚಾರಣೆ ಕುರಿತೇ ಸ್ಟೋರಿಯನ್ನು ತಮ್ಮ ಎಫ್‌ಬಿ, ಇನ್ಸ್ಟಾಗ್ರಾಮ್ ಖಾತೆಯಲ್ಲಿ ಹಾಕಿಕೊಂಡಿದ್ದಾರೆ. ಇದು ಅವರ ಯಶಸ್ಸಿಗೆ ಹಿಡಿದ ಕನ್ನಡಿಯಾಗಿದೆ.

ಫೇಸ್‌ಬುಕ್ ಲಿಂಕ್: https://www.facebook.com/share/1CZdAzY3ML/